**ಕರ್ನಾಟಕ ಸರ್ಕಾರ**

ಕೃಷಿ ಇಲಾಖೆ, ಬೆಳಗಾವಿ ಜಿಲ್ಲೆ

ದಿನಾಂಕ:22.09.2014.

ಸಂಖ್ಯೆ/ಜಕೃನಿಬೆ/ಆತ್ಮ/ಸಿಬ್ಬಂದಿ-1/ನೇಮಕಾತಿ/2014-15.

**ಕೃಷಿ ಇಲಾಖೆಯಲ್ಲಿ ಆತ್ಮ ಯೋಜನೆಯಡಿ ಕೆಲಸ ನಿರ್ವಹಿಸಲು ಒಪ್ಪಂದದ ಮೇರೆಗೆ ಸಿಬ್ಬಂದಿ ನೇಮಕಾತಿ ಪ್ರಕಟಣೆ.**

ಆತ್ಮ ಯೋಜನೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 24 ರೈತ ಸಂಪರ್ಕ ಕೇಂದ್ರಗಳ (ಹೊಬಳಿ) ಪೈಕಿ ಕಾಗವಾಡ ರೈತ ಸಂಪರ್ಕ ಕೇಂದ್ರ ಮತ್ತು ತಾಲೂಕುಗಳ ಕಸಬಾ ರೈತ ಸಂಪರ್ಕ ಕೇಂದ್ರ ಹೊರತುಪಡಿಸಿ ಉಳಿದ ಅನುಭಂದ-1 ರಲ್ಲಿ ಕಾಣಿಸಿದ 23 ರೈತ ಸಂಪರ್ಕ ಕೇಂದ್ರಗಳಿಗೆ ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಹುದ್ದೆಗಳನ್ನು ಕನಿಷ್ಠ ಕೃಷಿ/ಕೃಷಿ ಸಂಬಂಧಿತ ವಿಶ್ವ ವಿದ್ಯಾನಿಲಯಗಳು ನೀಡುವ 2 ವರ್ಷಗಳ ಡಿಪ್ಲೋಮಾ ಪಡೆದ ಅಭ್ಯರ್ಥಿಗಳಿಗೆ ಮಾತ್ರ ಕನಿಷ್ಠ ಒಂದು (1) ವರ್ಷದ ವಿಸ್ತರಣಾ ಕ್ಷೇತ್ರಗಳಲ್ಲಿ ಅನುಭವ ಹೊಂದಿರುವುದ ಅವಶ್ಯವಿರುತ್ತದೆ, ಕೃಷಿ ಹಾಗೂ ಕೃಷಿ ಸಂಬಂಧಿತ ವಿಷಯಗಳಲ್ಲಿ ವಿಶ್ವ ವಿದ್ಯಾನಿಲಯಗಳು ನೀಡುವ ಪದವಿ/ಸ್ನಾತಕೋತ್ತರ ಪದವಿ ಪಡೆದವರಿಗೆ ಆದ್ಯತೆ ನೀಡುವುದು ಮತ್ತು ಅನುಭವದ ಅವಧಿಯು ಅವಶ್ಯಕವಾಗಿರುವದಿಲ್ಲ, ಮೇಲಿನ ಹುದ್ದೆ ಕ್ಷೇತ್ರಮಟ್ಟದಲ್ಲಿನ ವಿಸ್ತೀರ್ಣಾ ಚಟುವಟಿಕೆಗಳಿಗೆ ಸೀಮಿತವಿರುವದರಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿ 2014 ರ ಪ್ರಕಾರ ಅಭ್ಯರ್ಥಿಗಳ ವಯೋಮಿತಿಯು 45 ವರ್ಷದೊಳಗಿರುವುದು ಅಪೇಕ್ಷಣೀಯವಾಗಿರುತ್ತದೆ.

ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಷರತ್ತಿಗೆ ಒಳಪಟ್ಟು ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ತಾವು ಬೆಳಗಾವಿ ಜಿಲ್ಲೆಯಲ್ಲಿ ಕೆಲಸ ನಿರ್ವಹಿಸಲು ಆಸಕ್ತಿಉಳ್ಳವರು ಅಭ್ಯಥಿಗಳು ಬೆಳಗಾವಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ದಿನಾಂಕ:07.10.2014 ರೊಳಗಾಗಿ ಸೀಲು ಮಾಡಿದ ಲಕೋಟೆಯಲ್ಲಿ ಮುದ್ದಾಂ/ನೊಂದಣಿ ಅಂಚೆ ಮೂಲಕ ಸಲ್ಲಿಸುವುದು. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಹುದ್ದೆಗಳ ವಿವರ

| ಕ್ರ. ಸಂ. | ಹುದ್ದೆಯ ಹೆಸರು | ವಿದ್ಯಾರ್ಹತೆ | ಅನುಭವ | ಕಾರ್ಯಸ್ಥಾನ | ಮಾಹೆಯಾನ ವೇತನ (ರೂ.) |
|---|---|---|---|---|---|
| 1 | ಸಹಾಯಕ ತಾಂತ್ರಿಕ ವ್ಯವಸ್ಥಾಪಕರು | ಕನಿಷ್ಠ ಕೃಷಿ/ಕೃಷಿ ಸಂಬಂಧಿತ ವಿಶ್ವ ವಿದ್ಯಾನಿಲಯಗಳು ನೀಡುವ 2 ವರ್ಷಗಳ ಡಿಪ್ಲೋಮಾ ಕೋರ್ಸ ಹೊಂದಿರಬೇಕು. ಅಥವಾ ಕೃಷಿ/ಕೃಷಿಗೆ ಸಂಬಂಧಿತ ವಿಷಯಗಳಲ್ಲಿ ಪದವಿ/ ಪಡೆದ ಅಭ್ಯರ್ಥಿಗೆ ಆದ್ಯತೆ | ಕೃಷಿ/ಕೃಷಿ ಸಂಬಂಧಿತ ವಿಶ್ವ ವಿದ್ಯಾನಿಲಯಗಳು ನೀಡುವ 2 ವರ್ಷಗಳ ಡಿಪ್ಲೋಮಾ ಪಡೆದ ಅಭ್ಯರ್ಥಿಗಳಿಗೆ ಮಾತ್ರ ಕನಿಷ್ಠ ಒಂದು (1) ವರ್ಷದ ವಿಸ್ತರಣಾ ಕ್ಷೇತ್ರಗಳಲ್ಲಿ ಅನುಭವ ಹೊಂದಿರುವುದ ಅವಶ್ಯವಿರುತ್ತದೆ, | ಹೋಬಳಿ/ಗ್ರಾಮೀಣ ಮಟ್ಟದ ರೈತ ಸಂಪರ್ಕ ಕೇಂದ್ರ ಒಟ್ಟು 23 ಹುದ್ದೆಗಳು (ಅನುಭಂದ -1 ರಲ್ಲಿ ಕಾಣಿಸಿರುವ ಹೋಬಳಿಗಳಿಗೆ) | ರೂ.15,000/- |

ಹೆಚ್ಚಿನ ವಿವರಗಳಿಗೆ ಜಿಲ್ಲಾ ಪಂಚಾಯತ, ಬೆಳಗಾವಿ ಇವರ website http://zpbelgaum.kar.nic.in ನಲ್ಲಿ ಮಾಹಿತಿ ಪಡೆಯಬಹುದು. ಅರ್ಜಿಗಳನ್ನು website ನಿಂದ download ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ: 07.10.2014 ರೊಳಗೆ ಸಂಜೆ 5.00 ಗಂಟೆ ಒಳಗಾಗಿ ಜಂಟಿ ಕೃಷಿ ನಿರ್ದೇಶಕರು, ಶಿವಾಜಿ ನಗರ, ಬೆಳಗಾವಿ ಜಿಲ್ಲೆ 590016 ಈ ಕಚೇರಿಗೆ ತಲುಪಿಸುವುದು. ಲಕೋಟೆಯ ಮೇಲೆ ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಕೆಂಪು ಶಾಯಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

ಅರ್ಜಿಗಳನ್ನು website ನಲ್ಲಿ ಸೂಚಿಸಿರುವಂತೆ ಅಭ್ಯರ್ಥಿಯು ಅರ್ಜಿಯೊಂದಿಗೆ ಸಲ್ಲಿಸಲಾಗಿರುವ ಮಾಹಿತಿ/ದಾಖಲಾತಿಗಳನ್ವಯ ಆದ್ಯತೆ ಪಟ್ಟಿಯನ್ನು ತಯಾರಿಸಿ ಜಂಟಿ ಕೃಷಿ ನಿರ್ದೇಶಕರ ಕಚೇರಿಗಳಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳಿಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬೆಳಗಾವಿ / ಆತ್ಮ ಘಟಕವನ್ನು ಸಂಪರ್ಕಿಸುವುದು.

ಅಧ್ಯಕ್ಷರು, ಜಿಲ್ಲಾ ಆಯ್ಕೆ ಸಮಿತಿ,
ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್.
ಬೆಳಗಾವಿ.

ಫೋಟೋ

# ಕೃಷಿ ಇಲಾಖೆಯಲ್ಲಿ ಆತ್ಮ ಯೋಜನೆಯಡಿಯಲ್ಲಿ ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ಹುದ್ದೆಗಳ ನೇಮಕಾತಿಗಾಗಿ ಅರ್ಜಿ

| | |
|---|---|
| 1. ಹುದ್ದೆಯ ಹೆಸರು | |
| 2. ಅಭ್ಯರ್ಥಿಯ ಹೆಸರು | |
| 3. ತಂದೆಯ/ಗಂಡನ ಹೆಸರು | |
| 4. ಜನ್ಮ ದಿನಾಂಕ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| 5. ಅಂಚೆ ವಿಳಾಸ | |
| 6. ಫೋನ್ ಸಂಖ್ಯೆ | |
| 7. ಮೊಬೈಲ್ ಸಂಖ್ಯೆ | |
| 8. ಇ–ಮೇಲ್ | |
| 9. ಕೆಲಸ ಮಾಡಲು ಇಚ್ಛೆಯುಳ್ಳ ಹೋಬಳಿಗಳನ್ನು ಸೂಚಿಸುವುದು (ಜಿಲ್ಲಾ ಪಂಚಾಯತ ವೆಬ್ ಸೈಟ್‌ನಲಿ ಕಾರ್ಯಸ್ಥಾನ ವಿವರಗಳನ್ನು ಪಡೆಯಬಹುದು) | |
| 10. ಪರಿಶಿಷ್ಠ ಜಾತಿ/ಪಂಗಡಕ್ಕೆ ಸೇರಿದವರೆ? (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| 11. ವಿದ್ಯಾರ್ಹತೆ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| 12. ಕೆಲಸದ ಅನುಭವ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| 13. ಹಿಂದಿನ ಹುದ್ದೆಯಲ್ಲಿ ಪಡೆದ ಅಂತಿಮ ವೇತನದ ವಿವರ(ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| 14. ನಡತೆ ಪ್ರಮಾಣ ಪತ್ರ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |
| 15. ವೈದ್ಯಕೀಯ ಅರ್ಹತೆ ಪ್ರಮಾಣ ಪತ್ರ (ದೃಢೀಕರಣ ಪತ್ರದ ಪ್ರತಿ ಲಗತ್ತಿಸಿ) | |

ನೋಟ್ : 1) ಕ್ರಮ ಸಂಖ್ಯೆ 11 ರಿಂದ 15ರವರೆಗೆ ಯಾವುದೇ ದೃಢೀಕರಣ ಪತ್ರ ಲಗತ್ತಿಸದೇ ಇದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

2) ಕ್ರಮ ಸಂಖ್ಯೆ 9 ರಲ್ಲಿ ಸೂಚಿಸಿದ ಸ್ಥಳಗಳನ್ನು ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಲಭ್ಯವಿದ್ದಲ್ಲಿ ಮಾತ್ರ ನೀಡಲಾಗುವುದು, ಉಳಿದಂತೆ ಇಲಾಖೆಯು ಸೂಚಿಸಿದ ಸ್ಥಳಗಳಲ್ಲಿ ಕಾರ್ಯನಿರ್ವಹಿಸಲು ಸಿದ್ದವಾಗಿರಬೇಕು.

## ಅಭ್ಯರ್ಥಿಯ ಘೋಷಣೆ

ಮೇಲೆ ತಿಳಿಸಿರುವ ಎಲ್ಲಾ ಮಾಹಿತಿಯು ಸತ್ಯವಾಗಿರುತ್ತದೆ ಎಂದು ದೃಢೀಕರಿಸುತ್ತೇನೆ.

ಸ್ಥಳ :

ದಿನಾಂಕ : ಸಹಿ

# ಅನುಬಂಧ 1

## ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಹುದ್ದೆಗೆ ನಿಯೋಜಿಸಬೇಕಾದ ರೈತ ಸಂಪರ್ಕ ಕೇಂದ್ರಗಳ ವಿವರ.

| ಕ್ರ. ಸಂ. | ತಾಲ್ಲೂಕು | ರೈತ ಸಂಪರ್ಕ ಕೇಂದ್ರಗಳು | ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ |
|---|---|---|---|
| 1 | ಅಥಣಿ | ಅನಂತಪೂರ | 2 |
| | | ಕಾಗವಾಡ | |
| 2 | ಬೈಲಹೊಂಗಲ | ನೇಸರರಗಿ | 2 |
| | | ಕಿತ್ತೂರ | |
| 3 | ಬೆಳಗಾವಿ | ಕಾಕತಿ | 3 |
| | | ಹಿರೇಬಾಗೇವಾಡಿ | |
| | | ಉಚಗಾವ | |
| 4 | ಚಿಕ್ಕೋಡಿ | ಸದಲಗಾ | 3 |
| | | ನಿಪ್ಪಾಣಿ | |
| | | ನಾಗರಮುನ್ನೋಳಿ | |
| 5 | ಗೋಕಾಕ | ಅರಭಾವಿ | 2 |
| | | ಕೌಜಲಗಿ | |
| 6 | ಹುಕ್ಕೇರಿ | ಯಮಕನಮರ್ಡಿ | 2 |
| | | ಸಂಕೇಶ್ವರ | |
| 7 | ಖಾನಾಪೂರ | ಬೀಡಿ | 2 |
| | | ಗುಂಜಿ | |
| 8 | ರಾಯಬಾಗ | ಕುಡಚಿ | 1 |
| 9 | ರಾಮದುರ್ಗ | ಕೆ. ಚಂದರಗಿ | 3 |
| | | ಸುರೇಬಾನ | |
| | | ಕಟಗೋಳ | |
| 10 | ಸವದತ್ತಿ | ಮುರಗೋಡ | 3 |
| | | ಮುನವಳ್ಳಿ | |
| | | ಯರಗಟ್ಟಿ | |
| | | | 23 |

## ಅನುಬಂಧ– 8

**ಗುತ್ತಿಗೆ ಆಧಾರಿತ ಸೇವೆ ಸಲ್ಲಿಸುವಲ್ಲಿ ಅಭ್ಯರ್ಥಿಯು ಸಲ್ಲಿಸಬೇಕಾದ ಒಪ್ಪಂದದ ನೇಮಕಾತಿಯ ನಿಬಂಧನೆ ಹಾಗೂ ಷರತ್ತುಗಳು ಈ ಕೆಳಕಂಡಂತಿರುತ್ತವೆ.**

ರಿಂದ ಪ್ರಾರಂಭಗೊಂಡು 179
ಶ್ರೀ ____________ರವರ ಒಪ್ಪಂದದ ನೇಮಕಾತಿ ಅವಧಿಯು ದಿನಾಂಕ:__________ ರಿಂದ ಪ್ರಾರಂಭಗೊಂಡು ಇದ್ದು ದಿನಗಳವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ. ಇವರ ಒಪ್ಪಂದದ ನೇಮಕಾತಿ ಕ್ರೋಢೀಕೃತ ಮಾಸಿಕ ಸಂಬಳ ದಿನಾಂಕ:____________ ರಿಂದ ರೂ______________ ಎಂದು ನಿಗದಿಪಡಿಸಲಾಗಿದೆ. ಇದಲ್ಲದೆ ಇನ್ನಿತರ ಯಾವುದೇ ಭತ್ಯೆಗಳಿಗೂ ಇವರು ಅರ್ಹರಾಗಿರುವುದಿಲ್ಲ.

1. ವರ್ಷಕ್ಕೊಮ್ಮೆ ಸೇವಾ ನವೀಕರಣವನ್ನು ಪಡೆಯುವಾಗ ಸಿಬ್ಬಂದಿಯ ಹಿಂದಿನ ಒಂದು ವರ್ಷದ ಕಾರ್ಯಪಾಲನಾ ವರದಿ ತೃಪ್ತಿಕರವಾಗಿದ್ದಲ್ಲಿ ಮಾತ್ರ ಕೇಂದ್ರ ಕಛೇರಿಯಿಂದ ಮಾಸಿಕ ಸಂಬಳಕ್ಕೆ ಶೇಕಡ 10 ರಷ್ಟು ಹೆಚ್ಚುವರಿ ವೇತನಕ್ಕೆ ಅನುಮೋದನೆಯನ್ನು ನೀಡಲಾಗುವುದು.
2. ಇವರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಪ್ರವಾಸ ಮಾಡುವುದು. ಅವರ ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
3. ಸದರಿ ಒಪ್ಪಂದದ ನೌಕರರು ಪ್ರತಿ ಮಾಹೆಗೆ ಒಂದರಂತೆ ಸಾಂದರ್ಭಿಕ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಪ್ರತಿ ಮಾಹೆಗೆ ಒಂದರಂತೆ ಸಾಂದರ್ಭಿಕ ರಜೆಗಳನ್ನು ಕ್ರೂಢಿಕರಿಸಿ ಒಟ್ಟಾಗೆ ಪಡೆಯಬಹುದಾಗಿದೆ.
4. ಸಕ್ಷಮ ಒಪ್ಪಂದದ ಪ್ರಾಧಿಕಾರದ ಅನುಮತಿ ಪಡೆಯದೇ ವೈದ್ಯಕೀಯ ಕಾರಣಗಳ ಮೇಲಾಗಲಿ ಅಥವಾ ಬೇರೆ ಕಾರಣಗಳಿಂದಾಗಲಿ ಅನಧಿಕೃತ ಗೈರುಹಾಜರಿಯಾದಲ್ಲಿ ಗುತ್ತಿಗೆ ಆಧಾರದ ನೇಮಾಕಾತಿಯು ತಾನಾಗೇ ರದ್ದಾಗುತ್ತದೆ.
5. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆದು ವೈದ್ಯಕೀಯ ಕಾರಣಗಳ ಮೇಲಾಗಲಿ ಅಥವಾ ಸಮರ್ಥನೀಯ ಕಾರಣಗಳ ಮೇರೆಗೆ ಗುತ್ತಿಗೆ ಆಧಾರದ ಅವಧಿಯಲ್ಲಿ ಒಂದು ತಿಂಗಳಿಗೆ ಮೀರದಂತೆ ಗೈರುಹಾಜರಾದಲ್ಲಿ ಆ ಕಾರಣದಿಂದ ಗುತ್ತಿಗೆ ನೇಮಕಾತಿ ರದ್ದಾಗುವುದಿಲ್ಲ. ಆದರೆ ಈ ಅವಧಿಯನ್ನು ಕರ್ತವ್ಯರಹಿತ ದಿನ (ಡೈಸ್‌ಪಾಸ್)ಗಳೆಂದು ಪರಿಗಣಿಸಲಾಗುವುದು ಮತ್ತು ಅವರು ಈ ಅವಧಿಗೆ ಯಾವುದೇ ವೇತನ ಮತ್ತು ಇತರ ಸೌಲಭ್ಯಗಳಿಗೆ ಅರ್ಹರಾಗಿರುವುದಿಲ್ಲ. ಗುತ್ತಿಗೆ ಆಧಾರದ ಅವಧಿಯಲ್ಲಿ ಒಂದು ತಿಂಗಳು ಮೀರಿ ಗೈರುಹಾಜರಾದಲ್ಲಿ ಆ ಕಾರಣದಿಂದ ಗುತ್ತಿಗೆ ನೇಮಕಾತಿ ತಾನಾಗಿಯೇ ರದ್ದಾಗುವುದು.
6. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ, ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.
7. ಆಯಾ ಜಿಲ್ಲೆಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಆಯಾ ಜಿಲ್ಲೆಯ ರೈತ ಸಂಪರ್ಕ ಕೇಂದ್ರ ಸ್ಥಾನಗಳಲ್ಲಿ ಕಾರ್ಯನಿರ್ವಹಿಸತಕ್ಕದ್ದು. ಯಾವುದೇ ಸ್ಥಳ ಬದಲಾವಣೆಗೆ ಬರುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.
8. ಸದರಿ ನೌಕರರ ದುರ್ವರ್ತನೆ, ನಿರ್ಲಕ್ಷ್ಯತೆಯ ನಿಮಿತ್ತ ಸರ್ಕಾರಕ್ಕೆ ಸಂಭವಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.
9. ಸದರಿ ಒಪ್ಪಂದದ ನೇಮಕಾತಿಯನ್ನು ಯಾವುದೇ ಕಾರಣಕ್ಕೂ ಖಾಯಂ ಎಂದು ಪರಿಗಣಿಸಲಾಗುವುದಿಲ್ಲ.
10. ಇವರು ತಮ್ಮ ಕರ್ತವ್ಯ, ಕಾರ್ಯವನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ನಿರ್ವಹಿಸತಕ್ಕದ್ದು.
11. ಇವರು ತಮ್ಮ ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
12. ಇವರು 1966ರ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿಗಳು ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳಿಗೆ ಬದ್ಧರಾಗಿರತಕ್ಕದ್ದು.
13. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿ ತಾನಾಗಿಯೇ ಮುಕ್ತಾಯವಾಗುತ್ತದೆ.
14. ಇವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷ್ಯತೆ, ಉದಾಸೀನತೆಯಿಂದಾಗಲಿ ಸರ್ಕಾರಕ್ಕೆ ಆದ ಆರ್ಥಿಕ ನಷ್ಟವನ್ನು ತುಂಬಿಕೊಡಲು ಹೊಣೆಯಾಗಿರುತ್ತಾರೆ.
15. ಹುದ್ದೆಗೆ ನಿಗದಿಪಡಿಸಿದ ಕರ್ತವ್ಯಗಳನ್ನು ಹಾಗೂ ಮೇಲಧಿಕಾರಿಗಳು ಆಗಿಂದಾಗ್ಯೆ ಹೇಳುವ ಕರ್ತವ್ಯಗಳನ್ನು ಚಾಚೂ ತಪ್ಪದೆ ನಿರ್ವಹಿಸುವುದು.

ಸಹಿ

ಸಾಕ್ಷಿಗಳು:

1.

2.